## ಚಿರಂತನವಿರಲಿ ಈ ಅನುಬಂಧ

ನಲ್ಮೆಯ ಸುಧಾಳಿಗೆ,
ಅಭಿನಂದನೆಗಳು, ನಮ್ಮ ಮನೆಯ, ನಮ್ಮ ಜೀವನದ ಅವಿಭಾಜ್ಯ ಅಂಗವಾಗಿ ಅಮೃತವನ್ನೇ ಉಣಬಡಿಸಿದ್ದಕ್ಕೆ.

ನೀನು ಬರುವ ದಿನ ಓಡೋಡಿ ಬರಮಾಡಿಕೊಂಡು ಎಲ್ಲ ಧಾರಾವಾಹಿಗಳು, ಫ್ಯಾಂಟಮ್, ಡಾಬೂ, ಮಾಂಡ್ರೆಕ್, ಮಜನೂ ಚಿತ್ರಕಥೆಗಳನ್ನು ಓದಿ ಮುಗಿಸುವವರೆಗೆ ಅಕ್ಕಂದಿರ ಜೊತೆ ಜಗಳವೇ...

ಅಭಿನಂದನೆಗಳು, ಸಾಹಿತ್ಯಲೋಕದ ದಿಗ್ಗಜರಾದ ಜೆ.ಪಿ. ರಾಜರತ್ನಂ, ಬೀಚಿ, ಅನುಪಮಾ ನಿರಂಜನ, ಅಶ್ವಿನಿ, ಉಷಾ ನವರತ್ನರಾಂ, ಡಿ.ವಿ. ರಾವ್, ಟಿ.ಕೆ. ರಾಮರಾವ್, ಹೆಚ್.ಕೆ. ಅನಂತರಾವ್, ಕೆ.ಟಿ. ಗಟ್ಟಿ, ರಾಜಶೇಖರ್ ಭೂಸನೂರಮಠ, ವಿಜಯ ಸಾಸನೂರ, ನಾ ಡಿಸೋಜ, ವಸುಮತಿ ಉಡುಪ, ಭುವನೇಶ್ವರಿ ಹೆಗಡೆ, ವೈದೇಹಿ, ವಾಣಿ, ನೇಮಿಚಂದ್ರ, ಯಂಡಮೂರಿ ವೀರೇಂದ್ರನಾಥ್, ಕೆ.ಎನ್. ಗಣೇಶಯ್ಯ... ಇನ್ನೂ ಹೆಸರಾಂತ ಲೇಖಕರನ್ನು ಪರಿಚಯ ಮಾಡಿಸಿದ್ದಕ್ಕಾಗಿ.

ಅಭಿನಂದನೆಗಳು, ಈಗಲೂ ಕಣ್ಣಿಗೆ ಕಟ್ಟಿದಂತಿರುವ ಜಿ.ಕೆ. ಸತ್ಯರವರ ಚಿತ್ರಗಳು, ಬಿ.ವಿ. ರಾಮಮೂರ್ತಿ, ಎಸ್.ಕೆ. ನಾಡಿಗ್, ಗುಜ್ಜಾರಪ್ಪ, ಜಿ.ವೈ. ಹುಬ್ಳೀಕರ್‌ರವರ ವ್ಯಂಗ್ಯಚಿತ್ರಗಳ ಮೂಲಕ ಸಮಾಜವನ್ನು ಪರಿಚಯಿಸಿದ್ದಕ್ಕೆ. ಗೆಳೆಯ ಶ್ರೀವತ್ಸ ಹಾಗೂ ಅನೇಕ ಛಾಯಾಗ್ರಾಹಕರ ಸುಂದರವಾಗಿ ಸೆರೆಹಿಡಿದ ಚಿತ್ರಗಳಿಗೆ, ಚಲನಚಿತ್ರ ನಟ ನಟಿಯರ ಚಿತ್ರಗಳನ್ನು ಸಂಭ್ರಮಿಸಲು ಅನುವು ಮಾಡಿಕೊಟ್ಟಿದ್ದಕ್ಕೆ. ಕನ್ನಡದ ಓದುಗರೊಂದಿಗೆ ನಿನ್ನ ಅನುಬಂಧ ಚಿರಂತನವಾಗಿರಲಿ.

—ಓಂಕಾರ್ ಗುರುಸಿದ್ದಪ್ಪ ಕೊಟ್ರೆ, ಬೆಂಗಳೂರು

## ಮತ್ತಷ್ಟು, ಮಗದಷ್ಟು...

ನನ್ನ ನೆಚ್ಚಿನ ಸುಧಾ 60ನೇ ವರ್ಷಕ್ಕೆ ಕಾಲಿಟ್ಟಿರುವುದು ಸಂತಸ, ಹೆಮ್ಮೆಯ ವಿಷಯ. ನಾನು 70ರ ದಶಕದಿಂದ ಸುಧಾ ಪತ್ರಿಕೆಯ ನಿರಂತರ ಓದುಗ. 70 ಮತ್ತು 80ರ ದಶಕಗಳಲ್ಲಿ ಸುಧಾ ಪತ್ರಿಕೆಯ ಮುಖಪುಟ ಚಿತ್ರಗಳು ಬಹು ಆಕರ್ಷಕವಾಗಿದ್ದು, ಅದಕ್ಕಾಗಿಯೇ ಪತ್ರಿಕೆಯನ್ನು ಕೊಂಡುಕೊಳ್ಳೋಣ ಅನಿಸುತ್ತಿತ್ತು. ವಾಚಕ ವೃಂದಕ್ಕೆ ಸುಧಾ ಹಲವಾರು ಮಹತ್ತರ ಕೊಡುಗೆಗಳನ್ನು ನೀಡಿದೆ. 90ರ ದಶಕದಲ್ಲಿ ಅನೇಕಾನೇಕ ಸಾಹಿತಿಗಳನ್ನು ಮತ್ತು ಕನ್ನಡ/ಕರ್ನಾಟಕಕ್ಕೆ ಸೇವೆ ಸಲ್ಲಿಸಿದ್ದ ಮಹನೀಯರನ್ನು ಪರಿಚಯಿಸಿದೆ. ಈ ಸಂಚಿಕೆಗಳೆಲ್ಲವೂ ನನ್ನ ಬಳಿ ಇವೆ. ಬಹಳಷ್ಟು ಗಣ್ಯರ ಆತ್ಮಚರಿತ್ರೆಗಳನ್ನು ಪ್ರಕಟಿಸಿದ್ದು, ವಚನ ಭಾರತವನ್ನು ಚಂದ್ರನಾಥ ಆಚಾರ್ಯರ ಅದ್ಭುತ ಚಿತ್ರಗಳೊಡನೆ ಪುನಃ ಪ್ರಕಟಿಸಿದ್ದು, ವಿಚಾರರಶ್ಮಿ, ಎಚ್ಚೆಸ್ಕೆಯವರು ಸ್ವಾರಸ್ಯವಾಗಿ ನಿರೂಪಿಸುತ್ತಿದ್ದ ವ್ಯಕ್ತಿ ಚಿತ್ರಣಗಳು... ಇತ್ಯಾದಿ. ಸುಧಾ ಮತ್ತಷ್ಟು ಮಗದಷ್ಟು ಓದುಗ ಬಳಗವನ್ನು ಹೆಚ್ಚಿಸಿಕೊಳ್ಳಲಿ...

—ಎನ್. ರಾಘವನ್, ಬೆಂಗಳೂರು




60 ವಜ್ರ ಮಹೋತ್ಸವ

59 ವಸಂತಗಳನ್ನು ಪೂರೈಸಿ 60ನೇ ವರ್ಷಕ್ಕೆ ಕಾಲಿಟ್ಟಿರುವ 'ಸುಧಾ'ಗೆ ಅಭಿನಂದನೆಗಳ ಮಹಾಪೂರವೇ ಬಂದಿದೆ. 'ಸುಧಾ' ಜೊತೆಗಿನ ನಂಟನ್ನು ಓದುಗರು ಆಪ್ತವಾಗಿ ತೆರೆದಿಟ್ಟಿದ್ದಾರೆ.

## ಚಿರಯೌವನೆ 'ಸುಧಾ'

ಸುಧಾ, ನಿನಗೆ ಅರವತ್ತು ತುಂಬಿತೇ...
ಅದೆಂಥ ಪಯಣ!
ಆಬಾಲ ವೃದ್ಧರು
ಮರಳಿ ಅರಳುತಿರುವ ಕಾಲ.
ಜೆ.ಪಿ ರಾಜರತ್ನಂ 'ವಿಚಾರ ರಶ್ಮಿ'ಯು
ಬೆಳಗಲಿ ಸದಾಕಾಲ.
ಧಾರಾವಾಹಿಯ ಕಂತುಗಳಲಿ
ಕಾದಂಬರಿಗಳ ಅನಾವರಣ
ವ್ಯಂಗ್ಯಚಿತ್ರ, ವಿಷಯ ವೈವಿಧ್ಯದಿ
ತುಂಬಿಹೆ ಹೂರಣವ
ಹಾಸ್ಯ ಲೇಪನದಿ ವಿಡಂಬಿಸುತ ನೀಡಿಹೆ
ಬಿಸಿ ಕಜ್ಜಾಯವ
ಚುಟುಕು, ಕಾವ್ಯಗಳಲಿ ದಾಖಲಿಸುವೆ
ಅಂದಂದಿನ ವಿದ್ಯಮಾನವ
ಗುಣ ಶ್ರೇಷ್ಠತೆಯ ಬಿಡದೆ ತನ್ನತನವ
ತೋರುತಾ ಸಾಗಿರುವೆ
ಆಕರ್ಷಣೆಯ ಅಕ್ಕರದಿ ವಾಚಕರ
ಸೆರೆ ಹಿಡಿದಿಹೆ ವಿನ್ಯಾಸದಿ
ಕ್ಷಮತೆಯ ನಿಷ್ಠೆಯಲಿ ಸದಭಿರುಚಿಯಲಿ
ನೀ ಚಿರಯೌವನೆ
ಕನ್ನಡಿಗರ ಅಸ್ಮಿತೆಯಲಿ
ಅಭಿಮಾನದಿ ಬೆಳಗು
ಸದಾ ಹಾರೈಸುವೆ...

—ವೈ. ಸತೀಶ ಕುಮಾರ, ಬಂಗಾರಪೇಟೆ

## ಅರವತ್ತರ ಆಪ್ತಗೆಳತಿ

ಅಂದಿನ ಒಂದು ಸಂಚಿಕೆಯ ಬೆಲೆ ನಲವತ್ತು ಪೈಸೆಯಿಂದ ಇಂದಿನ ₹25ವರೆಗೂ ಒಂದೇ ಒಂದು ಸಂಚಿಕೆಯನ್ನೂ ನಾನೇ ಖರೀದಿಸಿ (ಎರವಲು ಪಡೆಯದೆ) ಓದಿದ ಹೆಗ್ಗಳಿಕೆ ನನ್ನದು. 1965ರಲ್ಲಿ ಹುಟ್ಟಿದ ಸುಧಾ 60ಕ್ಕೆ ಕಾಲಿಟ್ಟಿದ್ದು ಸಂತೋಷವೆನಿಸಿತು.

ಮೊದಲ ಸಂಚಿಕೆಯ ಎರಡನೇ ರಕ್ಷಾಪುಟದಲ್ಲಿ ಎ.ಎಸ್. ಪ್ರಸನ್ನ ಅವರ ಚಿತ್ರ, (ಒಳ ಪುಟದಲ್ಲಿ ಲೇಖನ) ಮೂರನೆಯ ರಕ್ಷಾಪುಟದಲ್ಲಿ (ಅಮ್ಮು ಕನ್ನಡದ ಸೂಮ್ಮು) ಕು. ಜಯಲಲಿತಾ ಅವರಿಬ್ಬರ ಬಗ್ಗೆ ಬಂದ ಲೇಖನಗಳು ಇನ್ನೂ ಅಚ್ಚಳಿಯದೇ ನೆನಪಿವೆ. ವಾರಪತ್ರಿಕೆ ಎಂದರೆ ಹೀಗೆಯೇ ಇರಬೇಕು, ಮನೆಯಲ್ಲಿ ಎಲ್ಲ ವಯಸ್ಸಿನವರಿಗೂ ಓದುವಂತಿರಬೇಕೆಂದು ಒಂದು ಫಾರ್ಮುಲಾ ಹಾಕಿದವರು ನೀವೇ. ಕಥೆಗಳು, ಒಂದು ಧಾರಾವಾಹಿ, ಬೀchi (ಉತ್ತರಭೂಪ), ಮಹಿಳೆಯರಿಗೆ ಕಾಮಧೇನು ಎಂಬ ಒಂದು ಪುಟ, ಡಾ. ಜೆ.ಪಿ. ರಾಜರತ್ನಂ ಅವರ (ವಿಚಾರ ರಶ್ಮಿ), ಕ್ರೀಡಾಸುದ್ದಿಗಾಗಿ ಒಂದು ಪುಟ, ಮಕ್ಕಳಿಗಾಗಿ ನಾಲ್ಕು ಪುಟ... ಅಭಿರುಚಿಗೆ ತಕ್ಕಂತೆ ಪುಟಗಳನ್ನು ನೀಡಿದಿರಿ. 'ಸುಧಾ'ಗೆ ದೊಡ್ಡ ನಮನ.

—ವಿಜಯಕುಮಾರ್ ಪಿ.ಡಿ.

## ಆತ್ಮವಿಶ್ವಾಸ ಹೆಚ್ಚಿಸಿತು

ನನ್ನ ಹೈಸ್ಕೂಲ್ (1980–81) ದಿನಗಳಿಂದ ಸುಧಾಳ ನಂಟು ಬೆಸೆದುಕೊಂಡಿದೆ. ನಾನು ಸಾಮಾನ್ಯ ಜ್ಞಾನದ ಓದುಗ. ಸುಧಾದಲ್ಲಿ ಪ್ರಕಟವಾದ ಧಾರಾವಾಹಿಗಳನ್ನು ಓದಿ ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಂಡಿದ್ದೇನೆ. 'ಸುಧಾ' ನಿನ್ನ ಪಯಣ ಹೀಗೆ ಸಾಗಲಿ...

—ರಮೇಶ ಜವಳಗಿ, ಬನಹಟ್ಟಿ

## ಕಾಲಕ್ಕೆ ತಕ್ಕಂತೆ ಬದಲಾವಣೆ

ಸುಧಾ ತನ್ನ ವರ್ಚಸ್ಸನ್ನು ದಿನದಿಂದ ದಿನಕ್ಕೆ ಹೆಚ್ಚಿಸಿಕೊಳ್ಳುತ್ತಿದೆ. ಕಾಲಕ್ಕೆ ತಕ್ಕಂತೆ ಹಲವು ಮಾರ್ಪಾಡುಗಳನ್ನು ಮಾಡಿಕೊಂಡು ಎಲ್ಲರ ಮನಸ್ಸನ್ನೂ ಸೂರೆಗೊಂಡಿದೆ. ಸುಧಾದ ಹಿಂದಿನ ಸಂಚಿಕೆಗಳ ಉತ್ತಮ ಲೇಖನಗಳನ್ನು ಮರುಪ್ರಕಟಿಸಿದರೆ ಇನ್ನೂ ಚೆಂದ. ಹೊಸ ಪೀಳಿಗೆಗೆ ಹಲವಾರು ಹಳೆಯ ವಿಷಯಗಳು ನೂತನವಾಗಿರುತ್ತವೆ ಹಾಗೂ ಕುತೂಹಲದಿಂದ ಕೂಡಿರುತ್ತದೆ ಎಂಬುದು ನನ್ನ ಅಭಿಪ್ರಾಯ.

—ಎಂ.ಎಸ್. ಉಷಾ ಪ್ರಕಾಶ್, ಮೈಸೂರು

## ವಜ್ರದಂತೆ ಹೊಳೆಯುತಿರಲಿ

'ವಜ್ರದ ಹೊಳಪು, ಹೊಸ ಒನಪು'— ವಜ್ರವು ಕೆತ್ತಿದ ಮೇಲೆ ಹೊಳಪು ಹೆಚ್ಚಿಸಿಕೊಂಡಂತೆ, 'ಸುಧಾ', 60ರ ಹೊಸ್ತಿಲಿನಲ್ಲಿ ಡೈಮಂಡ್ ಕಟ್‌ಗಳಿಂದ ಮಿಂಚಿನ ಹೊಳಪಿನಂತೆ ಮನಸೂರೆಗೊಳ್ಳುತ್ತ ಅನಂತ ಕಾಲದವರೆಗೆ ಹೊಳೆಯುತ್ತಿರಲಿ.

—ಗುರುರಾಜ ಜೋಶಿ